

ಲೌಂಜಿನಲ್ಲಿ ವ್ಯಾಕ್ಸಿನಿನ ಸರತಿಯಲ್ಲಿರುವಾಗ, ಕಂಡರಿಯದ ಅಪರಿಚಿತನೊಬ್ಬ ಎರಡು 'ಗಜಾಂತರ'ದ ಕನಿಷ್ಠ–ನಿಗದಿಯನ್ನೇ ಉಲ್ಲಂಘಿಸಿ, ತೀರಾ ಕಿವಿಯೊಳಕ್ಕೇ ಬಾಯಿಕ್ಕಿ ಪಿಸುಗುಟ್ಟಿನಾದರೆ ಏನಾಗಬೇಡ? ಈ ಮಹಾಮಹಾ–ದುರಿತದ ಕಾಲದಲ್ಲಿ ಕಣ್ಣೊಗ್ಗದಗುವ ಜನವೆಲ್ಲ ಸಾವನ್ನಿಸಿ ತೋರುವವರಷ್ಟೆ? ಅಥವಾ, ಈ ಕೊರೊನಾಮಾರಿಯು ನಮ್ಮಗಳ ಎಚ್ಚರವನ್ನೇ ಎಕ್ಕುಡಿಸಿಟ್ಟಿದೆಯೇ?

'ವೆಲ್‌ನೆಸ್–ಕೇರ್' ಅಂತೆಂಬ ಐಷಾರಾಮೀ ಹಾಸ್ಪಿಟಲ್ಲಿನ ಫ್ರಂಟ್‌ಡೆಸ್ಕಿನಲ್ಲಿದ್ದ ಮಾಸ್ಕುಧಾರೀ–ಲಲನೆಯೆದುರು–ಅಡ್ಡಪಟ್ಟಿಯಿಂದೀಚೆನಿಂದಲೇ, ದನಿಯೆತ್ತರಿಸಿ 'ಆಧಾರಂಕಿ'ಯನ್ನೊರಲಿ, ಸರತಿ–ನಂಬರಿಸಕೊಂಡು,